‘ಅಯ್ಯೋ ಪುಣ್ಯಾತ್ಗಿತ್ತಿ, ಮೊಬೈಲಿನಲ್ಲಿ ಯಾಕಮ್ಮಾ ಹೀಗೆಲ್ಲಾ ರೊಮ್ಯಾನ್ಸ್ ಮಾಡಿ ನನ್ನ ಹೊಟ್ಟೆ ಉರಿಸ್ತಿ, ಈ ಮಾತನ್ನು ನನ್ನ ಮುಂದೆ ಬಂದು ಹೇಳಿದ್ರೆ ಒಂದು ಕೈ ನೋಡಬಹುದಿತ್ತಪ್ಪಾ...’ ಹೇಮಂತ ಕೀಟಲೆಯ ಧ್ವನಿಯಿಂದ ಮಾತನಾಡಿದ.

‘ಹೋಗು ಹೇಮಂತ್, ನೀನು ತುಂಬಾ ಕೆಟ್ಟವ್ನು...’ ಹುಸಿಮುನಿಸು ತೋರಿದಳು. ಋತು.

ಅವನೊಂದಿಗೆ ಮಾತನಾಡುತ್ತಾ ಸಮಯ ಉರುಳಿದುದೇ ತಿಳಿಯಲಿಲ್ಲ ಅವಳಿಗೆ. ಮಲಗಲೆಂದು ಬಂದಾಗಲೇ ಸಾಕಷ್ಟು ಹೊತ್ತಾಗಿತ್ತು. ರಮ್ಯ ಗಾಢ ನಿದ್ರೆಯಲ್ಲಿದ್ದಳು. ಅವಳಿಗೆ ಬೆಚ್ಚಗೆ ಉಲ್ಲನ್ ರಗ್ ಹೊದಿಸಿ ತಾನೂ ಹೊದ್ದು ಮಲಗಿಕೊಂಡಳು. ತಡರಾತ್ರಿಯಾಗಿದ್ದರೂ ನಿದ್ರೆ ಅವಳ ಹತ್ತಿರ ಸುಳಿಯಲು ತಕರಾರು ಮಾಡತೊಡಗಿತ್ತು.  ತಾನು ಕೋಟೆಬಂಗಲೆಯ ಸಮಸ್ತ ಆಸ್ತಿಯ ಉತ್ತರಾಧಿಕಾರಣಿಯಾಗಿರುವುದಕ್ಕೂ, ತಮ್ಮಿಬ್ಬರ ಪ್ರೀತಿಯ ವಿರೋಧಕ್ಕೂ ಸಂಬಂಧವನ್ನು ಕಲ್ಪಿಸಿದ್ದನು ಹೇಮಂತ. ಏನವನ ಮಾತಿನ ಮರ್ಮ....ಅವನ ಮಾತಿನಂತೆಯೇ ಯೋಚಿಸುವುದಾದರೆ ಈ ಬಂಗಲೆಯಲ್ಲೇ ತಮಗೆ ಶತ್ರುಗಳಿದ್ದಾರೆ!. ತಾನು ಹೇಮಂತನನ್ನು ಮದುವೆಯಾದರೆ ಮುಂದೆ ಕೋಟ್ಯಾಂತರ ಬೆಲೆ ಬಾಳುವ ಆಸ್ತಿ ಅವನ ಪಾಲಾಗುತ್ತದೆ ಎಂಬ ದೂರದೃಷ್ಟಿಯಿಂದ ಯಾರೋ ಬಂಗಲೆಯಲ್ಲಿ ವಿಪರೀತಗಳನ್ನು ಸೃಷ್ಟಿಸುತ್ತಿದ್ದಾರೆ. ಆದರೆ ಹಾಗೆ ಸೃಷ್ಟಿಸುವ ಅನಿವಾರ್ಯತೆ ಯಾರಿಗಿದೆ?....ತಾನು ಎಷ್ಟೆಂದರೂ ಪುರುಷೋತ್ತಮರ ಮುದ್ದಿನ ಮಗಳು. ಅವರು ತನ್ನ ಬಗ್ಗೆ ವಿರೋಧ ಭಾವ ಉಂಟು ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ, ಇನ್ನು ಚಂದ್ರಪ್ಪ ಸುಂದರಿ, ಅವರು ಎಷ್ಟಾದರೂ ಈ ಬಂಗಲೆಯ ಕೆಲಸದವರು. ಇನ್ನು ಭರತ. ಅವನೊಂದು ಮಗುವಿನಂತಾಗಿದ್ದಾನೆ, ತಾನ್ಯಾರು, ಏನು ಮಾಡುತ್ತಿದ್ದೇನೆ ಎಂಬುದೂ ಗೊತ್ತಿಲ್ಲದ ಒಬ್ಬ ಬುದ್ಧಿಮಾಂದ್ಯ. ಸಂದೇಹ ಪಡಬಹುದಾದ  ಏಕೈಕ ವ್ಯಕ್ತಿಯೆಂದರೆ ಅದು ಕಲಾವತಿ....! ಆ ಯೋಚನೆ ಬಂದಿದ್ದೇ ಬೆಚ್ಚಿದಳು ಋತು. ಎದೆ ಢವಢವನೆ ಹೊಡೆದುಕೊಳ್ಳತೊಡಗಿತ್ತು.

ಹಾಗಾದರೆ ಇಷ್ಟು ದಿನ ಚಿಕ್ಕಮ್ಮ ತನಗೆ ತೋರಿದ ವಾತ್ಸಲ್ಯ ಕೇವಲ ನಟನೆಯೇ? ಮಗ ಭರತ ಬುದ್ಧಿಮಾಂದ್ಯನಾಗಿ ಹೋದ. ಮಲಮಗಳು ಋತು ಮದುವೆಯನ್ನು ಮಾಡಿಕೊಂಡರೆ ಮುಂದೆ ಸಮಸ್ತ ಆಸ್ತಿಯೂ ಅವಳ ಸಂಸಾರದ ಪಾಲಾಗುತ್ತದೆ ಎಂದು ಯೋಚಿಸಿರಬಹುದೇ ಚಿಕ್ಕಮ್ಮ?....ಅದಕ್ಕೆ ಬಂಗಲೆಯಲ್ಲಿ ವಿಪರೀತಗಳು ನಡೆಯತೊಡಗಿದ ಕೂಡಲೇ ತನ್ನ, ಹೇಮಂತನ ಮದುವೆಯನ್ನು ವಿರೋಧಿಸಲು ಆರಂಭಿಸಿದಳು. ಹಾಗಾದರೆ ಹೇಮಂತ ಹಾಗೂ ರಮ್ಯಾರು ಹೇಳಿದಂತೆ ಅದು ಅವಳಾಡಿದ ನಾಟಕವೇ?....ಋತು ಗೊಂದಲದಲ್ಲಿದ್ದಳು. ಮನಸ್ಸು ಚಿಕ್ಕಮ್ಮನನ್ನು ಕೆಟ್ಟವಳೆಂದು ಒಪ್ಪಿಕೊಳ್ಳಲು ಹಿಂದೇಟು ಹಾಕುತ್ತಿದ್ದರೆ, ವಾಸ್ತವ ಅವಳನ್ನೇ ಕೆಟ್ಟವಳನ್ನಾಗಿ ಬಿಂಬಿಸತೊಡಗಿತ್ತು.

ಜೊತೆಗೆ ಬೆಳಗಿನ ಜಾವ ಬಿದ್ದ ಆ ವಿಚಿತ್ರವಾದ ಕನಸೂ ಅವಳನ್ನು ಕಾಡತೊಡಗಿತ್ತು. ತನ್ನ ಏಳನೆಯ ವರ್ಷದ ಹುಟ್ಟುಹಬ್ಬದಂದೇ ಡ್ರೈವರಿನ ಹಿಂದೆ ಓಡಿ ಹೋದ ತಾಯಿ ಹೇಮಲತಾಳ ಬಗ್ಗೆ ಅವಳಿಗರಿವಿಲ್ಲದಂತೆ ದ್ವೇಷವನ್ನು ಬೆಳೆಸಿಕೊಂಡಿದ್ದಳು. ಶಾಲಾ ದಿನಗಳಲ್ಲಿ ತಾಯಿಯಿಂದಾಗಿ ನಿತ್ಯವೂ ಅವಮಾನದ ಮಾತುಗಳನ್ನು ಕೇಳಿ ಹಿಡಿಯಾಗುತ್ತಿದ್ದಳು. ತನ್ನನ್ನು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದ ತಾಯಿಯೇ ತನಗೆ ಮೋಸ ಮಾಡಿದಳೆಂಬ ಭಾವನೆಯೇ ಹೆಚ್ಚಾಗಿ ಚಿಕ್ಕ ವಯಸ್ಸಿನಲ್ಲೇ ಆಘಾತಗೊಂಡಿದ್ದಳು. ಪರಿಣಾಮ....ನಿಶ್ಯಬ್ದಕ್ಕೆ, ಒಂಟಿತನಕ್ಕೆ ಹೆದರುತ್ತಿದ್ದಳು. ಜ್ವರವೇರಿ ನಿತ್ರಾಣಳಾಗುವುದು ಮಾಮೂಲಿಯಾಗಿತ್ತು. ಹೇಮಲತಾಳ ನೆನಪೇ ಬೇಡವೆಂದು ಪುರುಷೋತ್ತಮರು ಬಂಗಲೆಯ ಅವಳ ಎಲ್ಲ ಭಾವಚಿತ್ರಗಳನ್ನು ನಾಶಪಡಿಸಿದ್ದರು. ಆದರೂ ತಂದೆಯ ಕಣ್ತಪ್ಪಿಸಿ ತಾಯಿ ತನ್ನೊಂದಿಗಿರುವ ಭಾವಚಿತ್ರವನ್ನು ತಂದುಕೊಂಡು ಜೋಪಾನ ಮಾಡಿದ್ದಳು ಋತು. ಮುಂದೊಂದು ದಿನ ತಾಯಿ ಎದುರಾದರೆ ಅವಳನ್ನು ಗುರುತಿಸಲಿಕ್ಕಾದರೂ ಭಾವಚಿತ್ರ ಬೇಕೆಂದು ಎಳೆವಯಸ್ಸಿನ ಹುಡುಗಿ ಯೋಚಿಸಿದ್ದಳು. ಹಾಗೆ ತಾಯಿ ಒಂದು ವೇಳೆ ಎದುರಿಗೆ ಬಂದರೆ ತನ್ನ ಸಿಟ್ಟನ್ನು, ಆಕ್ರೋಶವನ್ನು ಹೊರಗೆಡವಿ ಬಿಡಬೇಕೆಂದನು ಯೋಚಿಸಿದ್ದು ಎಷ್ಟೋ ಬಾರಿ.

ಅಂಥ ತಾಯಿ ತನ್ನ ಕನಸಿನಲ್ಲಿ ಬಂದರೆ ತನಗೆ ಆಕ್ರೋಶ ಉಕ್ಕಬೇಕಿತ್ತು. ಆದರೆ ಅವಳ ಕರುಣಾಜನಕವಾದ ಮುಖ, ಬಿಚ್ಚಿದ ಉದ್ದ ತಲೆಗೂದಲು, ಕೊಳಕು ಸೀರೆ....ತಾನು ಹೆದರಿದ್ದು ಹೌದು. ಅದೇಕೆ ತನಗೆ ಅಂಥ ಕನಸು ಬೀಳಬೇಕು?....ರಮ್ಯ ಹೇಳಿದಂತೆ ಅಮ್ಮನ ಬಗ್ಗೆ ಮನಸ್ಸಿನ ಯಾವುದೋ ಒಂದು ಮೂಲೆಯಲ್ಲಿ ತನಗೆ ಪ್ರೀತಿ ಉಳಿದಿರಬಹುದೇ?....ಅದೇ ಕನಸಾಗಿ ಬಂದಿರಬಹುದೇ?....ಅವಳಲ್ಲಿ ಉತ್ತರವಿರಲಿಲ್ಲ. ಬಹಳಷ್ಟು ಹೊತ್ತು ಹೊರಳಾಡುತ್ತಾ ಯಾವಾಗಲೋ ನಿದ್ರಿಸಿದ್ದಳು.

ರಮ್ಯ ಬಂದು ಎಬ್ಬಿಸಿದಾಗಲೇ ಎಚ್ಚರ. ಗಡಿಬಿಡಿಯಿಂದ ಮೇಲೆದ್ದು ಪ್ರಾತಃ ವಿಧಿ ಮುಗಿಸಿ ಇಬ್ಬರೂ ತಯಾರಾದರು.

ಲಗೇಜಿನೊಂದಿಗೆ ಕೆಳಗಿಳಿದು ಬರುವ ವೇಳೆಗೆ ಎಂದಿನಂತೆ ಸುಂದರಿ ಬಂಗಲೆಯನ್ನು ಸ್ವಚ್ಛಗೊಳಿಸುತ್ತಿದ್ದಳು. ಕಲಾವತಿ ಉಪಾಹಾರವನ್ನು ಸಿದ್ಧಪಡಿಸಿ ಟೇಬಲ್ಲಿನ ಮೇಲೆ ಜೋಡಿಸಿಡುತ್ತಿದ್ದರು.

‘ಗುಡ್ ಮಾರ್ನಿಂಗ್ ಚಿಕ್ಕಮ್ಮ..’

ಋತು ತಾನಾಗಿಯೇ ಆಕೆಯನ್ನು ಮಾತನಾಡಿಸಿದರೂ ಆಕೆ ಮಾತನಾಡಲಿಲ್ಲ. ಈಗ ಸುಮ್ಮನಿರುವಂತೆ ರಮ್ಯ ಕಣ್ಸನ್ನೆ ಮಾಡಿದಾಗ ಋತು ಸುಮ್ಮನಾಗಲೇಬೇಕಾಯಿತು. ಆದರೂ ಚಿಕ್ಕಮ್ಮನ ಬದಲಾದ ವರ್ತನೆ ಅವಳಲ್ಲಿ ಅನೇಕ ಅನುಮಾನಗಳನ್ನು ಹುಟ್ಟು ಹಾಕತೊಡಗಿದ್ದವು.

ಮಾತಿಲ್ಲದೆ ಉಪಾಹಾರ ಮುಗಿಸುವ ವೇಳೆಗೆ ಹೊರಗೆ ಟ್ಯಾಕ್ಸಿಯೊಂದು ನಿಂತ ಸದ್ದಾಯಿತು. ಇಬ್ಬರೂ ಮೇಲೆದ್ದರು.

‘ಹುಷಾರಾಗಿ ಹೋಗಿದ್ದು ಬಾ ಋತು, ನಿನ್ನೆ ನಾನಾಡಿದ ಮಾತುಗಳು ನೆನಪಿರ್ಲಿ, ನೀನು ತೆಗೆದುಕೊಳ್ಳುವ ನಿರ್ಧಾರದ ಮೇಲೆ ಈ ಕೋಟೆ ಬಂಗ್ಲೆಯ ಭವಿಷ್ಯ ಅಡಗಿದೆ...’ ಎಂದಷ್ಟೇ ಹೇಳಿದರು ಕಲಾವತಿ.

ಪುರುಷೋತ್ತಮರ ಸುಳಿವಿರಲಿಲ್ಲ. ತಂದೆ ಬೇಗನೇ ಹೋಗಬೇಕೆಂದು ಹೇಳಿದ್ದು ನೆನಪಾಯಿತು ಋತುವಿಗೆ. ಭರತನಿಗಾಗಿ ಸುತ್ತಾ ಕಣ್ಣಾಡಿಸಿದಳು. ಅವನೆಲ್ಲೂ ಕಾಣಲಿಲ್ಲ. ಅವನೊಂದಿಗೆ ಒಡನಾಡಿದ ದಿನಗಳ ನೆನಪಾಗಿ ಕಣ್ತುಂಬಿತು. ಈ ಕೋಟೆ ಬಂಗಲೆಯಲ್ಲೇ ಯಾಕೆ ಹೀಗೆ?....ಒಬ್ಬೊಬ್ಬರೂ ಯಾವುದೋ ಒಂದು ಕಾರಣಕ್ಕೆ ಮೌನಿಗಳಾಗುತ್ತಲೇ ಹೋಗುತ್ತಿದ್ದಾರೆ.

ತನ್ನ ಯೋಚನೆಗಳನ್ನು ಕೊಡವಿಕೊಂಡು ಗೆಳತಿಯೊಂದಿಗೆ ಹೊರ ಬಂದಳು ಋತು. ಸುಂದರಿ ಅವರಿಬ್ಬರ ಲಗೇಜುಗಳನ್ನು ಎತ್ತಿಕೊಂಡು ಬಂದಳು. ಟ್ಯಾಕ್ಸಿಯ ಬಳಿ ಬರುವ ವೇಳೆಗೆ ಪುರುಷೋತ್ತಮರು ಋತುವಿನ ಮೊಬೈಲಿಗೆ ಕರೆ ಮಾಡಿ ಶುಭ ಪ್ರಯಾಣ ಕೋರಿದರು. ಅವರಿಗೆ ತಿಳಿದ ಟ್ಯಾಕ್ಸಿಯೇ ಆಗಿದ್ದುದರಿಂದ ಆತಂಕವಿರಲಿಲ್ಲ.

ಕೋಟೆ ಬಂಗಲೆ ಉನ್ನತಿಯತ್ತ ಋತು ರಮ್ಯರು ಕೈ ಬೀಸಿದರು. ಅವರನ್ನು ಹೊತ್ತ ಟ್ಯಾಕ್ಸಿ ಮುಖ್ಯ ರಸ್ತೆಗೆ ಬಂದು ಯಲಹಂಕವನ್ನು ದಾಟಿ ಹೈದರಾಬಾದ್ ಹೈವೇಯಲ್ಲಿ ಚಲಿಸತೊಡಗಿತ್ತು. ಗೆಳತಿಯರು ತಮ್ಮದೇ ಮಾತುಗಳಲ್ಲಿ ಮುಳುಗಿದರು. ಆದರೂ ರಮ್ಯಳು ಒಂದು ವಿಷಯವನ್ನು ಗಮನಿಸಿದ್ದಳು. ಕಪ್ಪು ಬಣ್ಣದ ಕಾರೊಂದು ಅವರನ್ನು ಎಡಬಿಡದೆ ಹಿಂಬಾಲಿಸುತ್ತಲೇ ಇತ್ತು....!

## ಹಿಂಬಾಲಿಸುತ್ತಿರುವ ಕಪ್ಪು ಕಾರು

ಮತ್ತೆ ಮತ್ತೆ ಹಿಂದಿರುಗಿ ನೋಡಿ ತನಗೆ ಬಂದ ಅನುಮಾನವನ್ನು ಪರಿಹರಿಸಿಕೊಂಡಳು ರಮ್ಯ. ಅನುಮಾನವೇ ಇರಲಿಲ್ಲ. ಕಪ್ಪು ಬಣ್ಣದ ಕಾರೊಂದು ಅವರನ್ನು ಹಿಂಬಾಲಿಸುತ್ತಿತ್ತು. ಮೊದಲಾದರೆ ಹೇಮಂತ, ಋತುವನ್ನು ಹಿಂಬಾಲಿಸುವ ಕೆಲಸ ಮಾಡುತ್ತಿದ್ದ. ಆದರೀಗ ಅವರಿಬ್ಬರ ಪ್ರೀತಿ ಚಿಗುರಿ ಹೆಮ್ಮರವಾಗಿದೆ. ಈಗ ಅವಳನ್ನು ಹಿಂಬಾಲಿಸುವ ಅಗತ್ಯ ಅವನಿಗಿಲ್ಲ. ಹಾಗೆ ಒಂದು ವೇಳೆ ಹಿಂಬಾಲಿಸಿದ್ದರೂ ಆ ವಿಷಯವನ್ನು ನೇರವಾಗಿ ಋತುವಿನೊಂದಿಗೆ ಅವನು ಹೇಳುತ್ತಿದ್ದ. ಹಾಗಾಗಿ ಈಗ ಹಿಂಬಾಲಿಸುತ್ತಿರುವ ಕಾರು ಹೇಮಂತನ ಕಡೆಯದಲ್ಲ. ಹಾಗಾದರೆ ಆ ಕಾರಿನಲ್ಲಿರುವಾತ ಯಾರಿರಬಹುದು?....ಋತುವಿನ ಚಲನವಲನಗಳ ಮೇಲೆ ಅವನೇಕೆ ನಿಗಾ ಇಟ್ಟಿದ್ದಾನೆ?

ಬಂಗಲೆಯಲ್ಲಿ ನಡೆಯುತ್ತಿರುವ ಪ್ರತಿಯೊಂದು ಘಟನೆಯೂ ಋತುವಿಗೆ ವಿರೋಧವಾಗಿದೆ. ಅವಳ ಪ್ರೀತಿಯನ್ನು ಹೊಸಕಿ ಹಾಕುವ ಹುನ್ನಾರ ವ್ಯವಸ್ಥಿತವಾಗಿ ನಡೆಯುತ್ತಿದೆ. ಮತ್ತೆ ಮತ್ತೆ ಕಲಾವತಿಯ ಮುಖವೇ ಕಣ್ಮುಂದೆ ಬರತೊಡಗಿತು ರಮ್ಯಾಳಿಗೆ. ಹೇಳಿ ಕೇಳಿ ಆಕೆಯ ಏಕೈಕ ಪುತ್ರನೀಗ ಬುದ್ಧಿಮಾಂದ್ಯನಾಗಿದ್ದಾನೆ. ಪುರುಷೋತ್ತಮರ ಆಸ್ತಿ ಎಂದೆಂದೂ ಆತನ ಪಾಲಿಗೆ ಬರುವುದಿಲ್ಲ. ಅದೇನಿದ್ದರೂ ಅವರ ಮಗಳು ಋತುವಿಗಷ್ಟೇ.